**17 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ**

**(ಸಿಸಿಹೆಚ್16), ಬೆಂಗಳೂರು ನಗರ**

**ಉಪಸ್ಥಿತರುಃ ಶ್ರೀ ಎಂ.ಹೆಚ್. ಅಣ್ಣಯ್ಯನವರ,** ಬಿ.ಕಾಂ.,ಎಲ್.ಎಲ್.ಬಿ
17 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್
ನ್ಯಾಯಾಧೀಶರು, ಬೆಂಗಳೂರು.

**ದಿನಾಂಕಃ 09 ನೇ ಅಕ್ಟೋಬರ್ ಮಾಹೆ 2023**

**ಅಸಲು ದಾವೆ ಸಂಖ್ಯೆ 951/2023**

**ವಾದಿಃ** ಶ್ರೀ. ಎ. ರವೀಂದ್ರ ನಾಯ್ಡು

**ವಿರುದ್ಧ**

**ಪ್ರತಿವಾದಿಃ** ಶಾರದ ಪೂರ್ಯ ನಾಯ್ಕ ಮತ್ತು ಇನ್ನೊಬ್ಬರು

**ಮಧ್ಯಂತರ ಅರ್ಜಿ 1**

**ಅರ್ಜಿದಾರರ/ವಾದಿಃ** ಶ್ರೀ. ಎ. ರವೀಂದ್ರ ನಾಯ್ಡು

**ವಿರುದ್ಧ**

**ಎದುರುದಾರ/ಪ್ರತಿವಾದಿಃ** ಶಾರದ ಪೂರ್ಯ ನಾಯ್ಕ ಮತ್ತು ಇನ್ನೊಬ್ಬರು

**ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ**

ವಾದಿ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ 1 ದಿವಾಣಿ ಪ್ರಕ್ರಿಯಾ ಸಂಹಿತೆ ಆಜ್ಞೆ ಕಲಂ 39 ನಿಯಮ 1 ಮತ್ತು 2 ರ ಸಹ ಕಲಂ 151 ರಡಿಯಲ್ಲಿ ಅರ್ಜಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಮಾನ್ಯ ನ್ಯಾಯಾಲಯವು ದಾವೆ ಇತ್ಯರ್ಥವಾಗುವವರೆಗೆ ವಾದಿಯ ದಾವಾ ಅನುಸೂಚಿ ಆಸ್ತಿಯನ್ನು ಪ್ರತಿವಾದಿಯಾಗಲೀ, ಅವರ ಏಜೆಂಟುರವರಾಗಲೀ, ಅವರ ಪರ ಯಾರೇ ಆಗಲೀ ಯಾವುದೇ ರೀತಿಯಿಂದ ಪರಭಾರೆ, ಅಥವಾ ಮಾರಾಟ ಮಾಡದಂತೆ, ಸದರಿ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

**2.** ಸದರಿ ಅರ್ಜಿಗೆ, 1ನೇ ಪ್ರತಿವಾದಿ ಪರ ವಕೀಲರು ಹಾಜರಾಗಿದ್ದು, ತಕರಾರು ಸಲ್ಲಿಸಿರುವುದಿಲ್ಲ. ನಂತರ ವಾದಿ 2ನೇ ಪ್ರತಿವಾದಿಯನ್ನು ಹೆಚ್ಚುವರಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಿದ್ದು, ಸದರಿ 2 ನೇ ಪ್ರತಿವಾದಿ ಲಿಖಿತ ಹೇಳಿಕೆ ಸಲ್ಲಿಸಿದ್ದು ಸದರಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ. ಸದರಿ 2ನೇ ಪ್ರತಿವಾದಿ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿರುವುದರಿಂದ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ. ವಜಾ ಆಗತಕ್ಕದ್ದು ಎಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಆದರೆ ಮಧ್ಯಂತರ ಅರ್ಜಿ 1ಕ್ಕೆ ತಕರಾರು ಸಲ್ಲಿಸಿರುವುದಿಲ್ಲ.

**3.** ಅರ್ಜಿ, ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತದೆ.

ಅಂಶಃ 1 ವಾದಿಯು, ದಾವಾ ಅನುಸೂಚಿತ ಆಸ್ತಿಯು ತನ್ನ ಪರವಾಗಿ ಮೇಲ್ನೋಟಕ್ಕೆ ಇರುತ್ತದೆ ಎಂದು ರುಜುವಾತು ಪಡಿಸುವರೇ ?

ಅಂಶಃ 2 ಅನುಕೂಲಕರ ಒಲವು ವಾದಿಯ ಪರವಾಗಿ ಇರುತ್ತದೆ ಎಂದು ವಾದಿಯು ರುಜುವಾತು ಪಡಿಸುವರೇ?

ಅಂಶಃ 3 ತುಂಬಲಾರದ ನಷ್ಟ ಯಾರಿಗೆ ಉಂಟಾಗುತ್ತದೆ?

ಅಂಶಃ 4 ಯಾವ ಆದೇಶ ?

**4.** ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ 1 ಃ ನಕಾರಾತ್ಮಕವಾಗಿ

ಅಂಶ 2 ಃ ನಕಾರಾತ್ಮಕವಾಗಿ

ಅಂಶ 3 ಃ ನಕಾರಾತ್ಮಕವಾಗಿ

ಅಂಶ 4ಃ ಕೊನೆಯ ಆದೇಶದಂತೆ

## ಕಾರಣಗಳು

**5. ಅಂಶ 1 ರಿಂದ 3ಃ-** ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಅಂಶ 1 ರಿಂದ 4ನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ. ಉಭಯ ವಕೀಲರ ವಾದ, ದಾಖಲೆಯನ್ನು ಪರಿಶೀಲಿಸಲಾಗಿ, ದಾವಾ ಆಸ್ತಿ ವಾದಿಯ ಪರವಾಗಿ ಮೇಲ್ನೋಟಕ್ಕೆ ಇದೇಯೇ? ಎಂಬ ಬಗ್ಗೆ ನ್ಯಾಯಾಲಯವು ಪರಿಶೀಲಿಸಬೇಕಾಗಿದ್ದು, ದಾವಾ ಆಸ್ತಿ ಬೆಂಗಳೂರು ದಕ್ಷಿಣ ತಾಲ್ಲೂಕು, ವರ್ತೂರು ಹೋಬಳಿ, ಜುನ್ನಸಂದ್ರ ಗ್ರಾಮದ, ಸರ್ವೇ ನಂ.37/5, ನಿವೇಶನ ನಂ.245,

ಭೂಪರಿವರ್ತನೆ ಆದೇಶ ನಂ.DIS.ALN. SR(S) 362/1991-92 Dt. 13.05.1992 ಕ್ಷೇತ್ರದ ಅಳತೆ ಪೂರ್ವ-ಪಶ್ಚಿಮಃ 60 ಅಡಿ, ಉತ್ತರ-ದಕ್ಷಿಣಃ 40 ಅಡಿ, ಇದರ ಚಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ನಿವೇಶನ ನಂ.292, ಉತ್ತರಕ್ಕೆಃ ನಿವೇಶನ ನಂ.244, ದಕ್ಷಿಣಕ್ಕೆಃ ನಿವೇಶನ ನಂ.246 ಈ ಚಕ್ಕುಬಂಧಿ ಮಧ್ಯದಲ್ಲಿರತಕ್ಕಂತಹ ಆಸ್ತಿ ದಾವಾ ಆಸ್ತಿಯಾಗಿರುತ್ತದೆ.

**6.** ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕ 29.11.2007 ರಂದು ಶ್ರೀ.ಎಸ್.ಸುಂದರ್ ರಾಜನ್ ರವರ ಕಡೆಯಿಂದ ನೋಂದಣಿ ಕ್ರಯಪತ್ರ ಮಾಡಿಸಿಕೊಂಡಿದ್ದು, ಆ ಪ್ರಕಾರ ಖಾತೆ ಬದಲಾವಣೆ ಮಾಡಿಕೊಂಡು, ಸ್ವಾಧೀನ ಮಾಲೀಕತ್ವವನ್ನು 1 ನೇ ಪ್ರತಿವಾದಿ ಹೊಂದಿರುತ್ತಾರೆ. ನಂತರ ಬಿ.ಬಿ.ಎಂ.ಪಿ ಯಲ್ಲಿ ಅರ್ಜಿ ಸಲ್ಲಿಸಿ, ಖಾತೆ ಬದಲಾವಣೆ ಸಹಿತ ಮಾಡಿಕೊಂಡು, ತೆರಿಗೆ ಕಟ್ಟುತ್ತಾ ಬಂದಿರುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಸದರಿ ಪ್ರತಿವಾದಿಯನ್ನು ಹೊರೆತುಪಡಿಸಿ, ಬೇರೆ ಯಾರಿಗೂ ಸಹಿತ ಹಕ್ಕು-ಅಧಿಕಾರ ಇರುವುದಿಲ್ಲ. ನಂತರ 1 ನೇ ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತನ್ನ ಸಹೋದರಿ ಶ್ರೀಮತಿ ಶೈಲಜಾ ನಾಯ್ಕರವರಿಗೆ ದಿನಾಂಕ 27.10.2021 ರಂದು ನೋಂದಾಯಿತ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ. ನಂತರ ಸದರಿ ಜಿ.ಪಿ.ಎ ಆಧಾರದ ಮೇಲೆ ದಾವಾ ಆಸ್ತಿಯನ್ನು ಜಿ.ಪಿ.ಎದಾರರು ವಾದಿಗೆ ಕ್ರಯಕ್ಕೆ ಕೊಡಲು ಒಪ್ಪಿಕೊಂಡಿದ್ದು, ಆ ಪ್ರಕಾರ ವಾದಿ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡಿ ದಾವಾ ಆಸ್ತಿಯನ್ನು ವಾದಿ ಕ್ರಯಕ್ಕೆ ಪಡೆಯಲು ಒಪ್ಪಿ, ರೂ.1,53,00,000/- ಕ್ರಯದ ಮಾತುಕತೆಯಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ದಿನಾಂಕ 16.09.2022 ರಂದು ಕ್ರಯದ ಕರಾರು ಪತ್ರವಾಗಿ ಅದೇ ದಿವಸ ರೂ.15 ಲಕ್ಷ ಮುಂಗಡ ಹಣವನ್ನು ಕೆನರಾ ಬ್ಯಾಂಕ್, ಬಿ.ಟಿ.ಎಂ ಲೇಔಟ್ ಶಾಖೆಯ ಚೆಕ್ ನಂಬರ್ 633099 ದಿನಾಂಕ 16.09.2022 ರ ದಿನಾಂಕವನ್ನು ನಮೂದಿಸಿ ಕೊಟ್ಟಿದ್ದು, ಆ ಪ್ರಕಾರ ಹಣವನ್ನು ಪಡೆದುಕೊಂಡಿರುತ್ತಾರೆ. ನಂತರ ದಿನಾಂಕ 10.10.2022 ರಂದು ಪುನಃ ರೂ.5 ಲಕ್ಷ ಹಣವನ್ನು ಕೆನರಾ ಬ್ಯಾಂಕ್ ಚೆಕ್ಕಿನ ಮುಖಾಂತರ ಜಿ.ಪಿ.ಎ ದಾರರು ಪಡೆದುಕೊಂಡಿರುತ್ತಾರೆ. ಒಟ್ಟು ರೂ.20 ಲಕ್ಷ ಮುಂಗಡ ಹಣವನ್ನು ಪಡೆದುಕೊಂಡಿರುತ್ತಾರೆ. ವಾದಿ ಉಳಿದ ರೂ.1,33,00,000/- ವಾದಿ ತಯಾರಿಟ್ಟುಕೊಂಡು ಪ್ರತಿವಾದಿಗೆ ದಾಖಲಾತಿಗಳನ್ನು ಸರಿ ಮಾಡಿ ನೋಂದಣಿ ಕ್ರಯಪತ್ರವನ್ನು ಮಾಡಿಕೊಡಬೇಕೆಂದು ಕೇಳಿದ್ದು, ನೋಂದಣಿ ಕ್ರಯಪತ್ರವನ್ನು ಮಾಡಿಕೊಡದೇ ಮುಂದೂಡುತ್ತಾ ಹೋಗಿದ್ದು, ನಂತರ ಪ್ರತಿವಾದಿ ಪೋನನ್ನು ಸ್ವೀರಿಕಸದೇ ಸ್ವಿಚ್ ಆಪ್ ಮಾಡಿರುತ್ತಾರೆ. ನಂತರ ದಿನಾಂಕ 30.11.2022 ರಂದು ಪ್ರತಿವಾದಿಗೆ ವಕೀಲರ

ಮುಖಾಂತರ ನೋಟಿಸ್ಸನ್ನು ಕಳುಹಿಸಲಾಗಿ, ಈ ವ್ಯಕ್ತಿ ಯಾರು ಇರುವುದಿಲ್ಲವೆಂದು ವಾಪಸ್ಸು ಬಂದಿದ್ದು, ನಂತರ ಜಿ.ಪಿ.ಎ ದಾರರಿಗೆ ಕಳುಹಿಸಿದ ನೋಟೀಸ್ಸು ಜಾರಿಯಾಗಿದ್ದು ಉತ್ತರ ಕೊಟ್ಟಿರುವುದಿಲ್ಲ. ನೋಂದಣಿ ಕ್ರಯಪತ್ರ ಮಾಡಿಕೊಟ್ಟಿಲ್ಲದೇ ಇರುವುದರಿಂದ, ಸದರಿ ಸ್ವತ್ತನ್ನು ಪ್ರತಿವಾದಿ ಬೇರೆಯವರಿಗೆ ಮಾರಾಟ ಮಾಡುವ ತಯಾರಿಯಲ್ಲಿದ್ದುದ್ದರಿಂದ ವಾದಿ ಈ ದಾವೆ ದಾಖಲು ಮಾಡಿರುತ್ತಾರೆ.

**7.** ಸದರಿ ದಾವೆ ನೋಂದಣಿ ಮಾಡಿಕೊಂಡು ಪ್ರತಿವಾದಿಗೆ ಸಮನ್ಸ್ ಕಳುಹಿಸಲಾಗಿ ಪ್ರತಿವಾದಿ ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿದ್ದು, ಲಿಖಿತ ಹೇಳಿಕೆ ಮತ್ತು ಮಧ್ಯಂತರ ಅರ್ಜಿ 1ಕ್ಕೆ ತಕರಾರನ್ನು ಸಲ್ಲಿಸಿರುವುದಿಲ್ಲ.

**8.** ನಂತರ 1ನೇ ಪ್ರತಿವಾದಿ ದಾವಾ ಸ್ವತ್ತನ್ನು 2ನೇ ಪ್ರತಿವಾದಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆಂದು ವಾದಿಗೆ ಗೊತ್ತಾದ ನಂತರ ವಾದಿ ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ದಿವಾಣಿ ಪ್ರಕ್ರಿಯಾ ಸಂಹಿತೆ ಆಜ್ಞೆ 1 ನಿಯಮ 10 (2) ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ನೋಟೀಸ್ಸು ಹೆಚ್ಚುವರಿ ಪ್ರತಿವಾದಿಗೆ ಜಾರಿಯಾಗಿ ತಕರಾರು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯವು ದಿನಾಂಕ 16.08.2023 ರಂದು ಪುರಸ್ಕರಿಸಲಾಗಿರುತ್ತದೆ. ನಂತರ ಹೆಚ್ಚುವರಿ ಪ್ರತಿವಾದಿ ಈ ದಾವೆಯಲ್ಲಿ 2ನೇ ಪ್ರತಿವಾದಿಯಾಗಿರುತ್ತಾರೆ.

**9.** 2ನೇ ಪ್ರತಿವಾದಿ ಪರ ವಕೀಲರು ಲಿಖಿತ ಹೇಳಿಕೆ ಸಲ್ಲಿಸಿ, ಸದರಿ ದಾವಾ ಸ್ವತ್ತನ್ನು ಸದರಿ ಪ್ರತಿವಾದಿ ದಿನಾಂಕ 21.11.2022 ರಂದು ನೋಂದಣಿ ಕ್ರಯಪತ್ರ ಮಾಡಿಕೊಂಡಿದ್ದು, ಆ ಪ್ರಕಾರ ಖಾತೆ ಬದಲಾವಣೆ ಮಾಡಿ, ಸ್ವಾಧೀನ ಹೊಂದಿದ್ದು, ದಾವೆ ದಾಖಲು ಮಾಡುವುದಕ್ಕಿಂತ ಪೂರ್ವದಲ್ಲಿ ಸದರಿ ದಾವಾ ಆಸ್ತಿಯನ್ನು ಸದರಿ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡಿರುವುದರಿಂದ, ಸದರಿ ದಾವೆ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲವೆಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**10.** ವಾದಿ ಮತ್ತು 2ನೇ ಪ್ರತಿವಾದಿ ಪರ ವಕೀಲರ ವಾದ ವಾದ ಪತ್ರ ಲಿಖಿತ ಹೇಳಿಕೆ ಪರಿಶೀಲಿಸಲಾಗಿ, 1ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕರು ಇರುತ್ತಾರೆ. 1ನೇ ಪ್ರತಿವಾದಿ ಶೈಲಜಾ ನಾಯ್ಕ ಇವರಿಗೆ ದಿನಾಂಕ 27.10.2021 ರಂದು ನೋಂದಾಯಿತ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ. ನಂತರ ಜಿ.ಪಿ.ಎ ದಾರರಾದ ಶೈಲಜಾ ನಾಯ್ಕ ಇವರು ವಾದಿಗೆ ದಾವಾ ಆಸ್ತಿಯನ್ನು ರೂ.1,53,60,000/- ಕ್ರಯಕ್ಕೆ ಕೊಡಲು ಒಪ್ಪಿ ರೂ.15ಲಕ್ಷ ಮುಂಗಡ ಹಣವನ್ನು ಪಡೆದುಕೊಂಡು ದಿನಾಂಕ 16.09.2022 ರಂದು ಕ್ರಯದ ಕರಾರು ಪತ್ರವನ್ನು

ಬರೆದುಕೊಟ್ಟಿರುತ್ತಾರೆ. ಹಾಗೂ ಮುಂದುವರಿದು ದಿನಾಂಕ 10.10.2022 ರಂದು ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ರೂ.5 ಲಕ್ಷ ಹಣವನ್ನು ಜಿ.ಪಿ.ಎ ದಾರರು ವಾದಿಯ ಕಡೆಯಿಂದ ಪಡೆದುಕೊಂಡಿದ್ದರ ಬಗ್ಗೆ ಹಣ ಸಂದಾಯ ರಶೀದಿ ಹಾಜರುಪಡಿಸಿರುತ್ತಾರೆ. ಈ ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿಯ ಜಿ.ಪಿ.ಎ ದಾರರಾದ ಶೈಲಜಾ ನಾಯ್ಕ ಮತ್ತು ವಾದಿಯ ಮಧ್ಯೆ ದಾವಾ ಆಸ್ತಿಯ ಬಗ್ಗೆ ಕ್ರಯದ ಕರಾರು ಪತ್ರವಾಗಿರುತ್ತದೆ. ವಾದಿ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಕ್ರಯದ ವ್ಯವಹಾರ ನಡೆದಿರುವುದಿಲ್ಲ.

**11.** ವಾದಿ ಮಧ್ಯಂತರ ಅರ್ಜಿಯಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಬೇರೆಯವರಿಗೆ ಪರಭಾರೆ ಮಾಡಬಾರದು ಎಂದು ವಿನಂತಿಸಿಕೊಂಡಿರುತ್ತಾರೆ. ವಾದಿ ಈ ದಾವೆಯನ್ನು ದಿನಾಂಕ 07.02.2023 ರಂದು ದಾಖಲು ಮಾಡಿರುತ್ತಾರೆ. 1 ನೇ ಪ್ರತಿವಾದಿ ಜಿ.ಪಿ.ಎ ದಾರರಾದ ಶೈಲಜಾ ನಾಯ್ಕ ಇವರ ಕಡೆಯಿಂದ ಸದರಿ ದಾವಾ ಆಸ್ತಿಯನ್ನು ದಿನಾಂಕ 21.11.2022 ರಂದು 2 ನೇ ಪ್ರತಿವಾದಿ ನೋಂದಣಿ ಕ್ರಯದ ಮುಖಾಂತರ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಕ್ರಯಪತ್ರ ವಾದಿಯು ಈ ದಾವೆ ದಾಖಲು ಮಾಡುವುದಕ್ಕಿಂತ ಪೂರ್ವದಲ್ಲಿ ಸದರಿ ಪ್ರತಿವಾದಿಗೆ ಕ್ರಯಪತ್ರವಾಗಿರುತ್ತದೆ. ಸದರಿ ಕ್ರಯಪತ್ರವಾಗಿ 2 ½ ತಿಂಗಳ ನಂತರ ವಾದಿ ಈ ದಾವೆ ದಾಖಲು ಮಾಡಿರುತ್ತಾರೆ. ವಾದಿ ತನ್ನ ಮಧ್ಯಂತರ ಅರ್ಜಿಯಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ವಿನಂತಿ ಇರುವುದರಿಂದ, ದಾವೆ ದಾಖಲು ಮಾಡುವುದಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿ 2 ನೇ ಪ್ರತಿವಾದಿಗೆ ನೋಂದಣಿ ಕ್ರಯಪತ್ರವಾಗಿರುವುದರಿಂದ, ದಾವಾ ಆಸ್ತಿಯ ಮಾಲೀಕತ್ವ ಸ್ವಾಧೀನ 1 ನೇ ಪ್ರತಿವಾದಿ ಹೊಂದಿರುವುದಿಲ್ಲ. ಸದರಿ ಮಧ್ಯಂತರ ಅರ್ಜಿ 1 ಯಲ್ಲಿ ನಮೂದಿಸಿದಂತಹ ವಿನಂತಿ 2 ನೇ ಪ್ರತಿವಾದಿಯ ಮೇಲೆ ಇರುವುದಿಲ್ಲ. ಆದ್ದರಿಂದ ಮಧ್ಯಂತರ ಅರ್ಜಿಯ ಮೇಲೆ ನ್ಯಾಯಾಲಯವು ನೀಡಿದಂತಹ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ 1 ನೇ ಪ್ರತಿವಾದಿಯ ಮೇಲೆ ಇರುವುದರಿಂದ, 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ಸ್ವತ್ತನ್ನು ಕ್ರಯಕ್ಕೆ ಕೊಟ್ಟಿರುವುದರಿಂದ, ಪುನಃ ನ್ಯಾಯಾಲಯವು ಮಧ್ಯಂತರ ಅರ್ಜಿಯ ಮೇಲೆ ನೀಡಿದ ಆದೇಶವನ್ನು ಮುಂದುವರಿಸಲು ಯಾವುದೇ ರೀತಿಯ ಸಕಾರಾಣಗಳು ಇರುವುದಿಲ್ಲ. ಈ ಕಾರಣದಿಂದ ಮಧ್ಯಂತರ ಅರ್ಜಿ 1 ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ.

**12.** ಈ ಮೇಲ್ಕಂಡ ಎಲ್ಲಾ ದಾವಾ ಆಸ್ತಿ ಮೇಲ್ನೋಟಕ್ಕೆ ವಾದಿಯ ಪರವಾಗಿ ಇರುವುದಿಲ್ಲ. ಅನುಕೂಲತೆ ಒಲವು ವಾದಿಯ ಪರವಾಗಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ 1ನ್ನು ಪುರಸ್ಕರಿಸಿದ್ದಲ್ಲಿ, 2ನೇ ಪ್ರತಿವಾದಿಗೆ ತುಂಬಾ ತೊಂದರೆ ಉಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಂಶ 1 ರಿಂದ 3ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

**13. ಅಂಶ 4ಃ** ಈ ಕೆಳಗಿನಂತೆಃ

## ಆದೇಶ

ವಾದಿ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆ ಆಜ್ಞೆ ಕಲಂ 39 ನಿಯಮ 1 ಮತ್ತು 2 ರ ಸಹ ಕಲಂ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ 1ನ್ನು ವಜಾ ಮಾಡಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿ ಅದನ್ನು ಗಣಕೀಕೃತ ಯಂತ್ರದ ಮೂಲಕ ಬೆರಳಚ್ಚು ಮಾಡಿದ ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು ಈ ದಿನ ದಿನಾಂಕಃ 09ನೇ ದಿವಸ ಅಕ್ಟೋಬರ್ ಮಾಹೆ 2023ನೇ ಇಸವಿಯಂದು ಪರಿಷ್ಕರಿಸಲ್ಪಟ್ಟ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಓದಲಾಗಿದೆ.)

Sd/-

**(ಎಂ.ಹೆಚ್. ಅಣ್ಣಯ್ಯನವರ)**

17ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು,

ಬೆಂಗಳೂರು.